**ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ ಸಿಂದಗಿ**

ಸಿ.ಸಿ.ನಂಬರ್ : 288/2018

ಪಿ.ಡಬ್ಲ್ಯೂ : 8 ಸಿ.ಡಬ್ಲ್ಯೂ 8

| | |
|---|---|
| ಸಾಕ್ಷಿದಾರರ ಹೆಸರು | : ಅಬ್ದುಲಖಾದರ ಮರೋಳ |
| ತಂದೆಯ ಹೆಸರು | : ಮಿರ್ತೇಸಾಬ |
| ವಯಸ್ಸು | : 36 ವರ್ಷ |
| ಉದ್ಯೋಗ | : ವ್ಯಾಪಾರ |
| ವಾಸಸ್ಥಳ | : ದೇವರಹಿಪ್ಪರಗಿ |
| ಸಮಯ | : 3.30 |

ಸಾಕ್ಷಿಗೆ ಇಂದು ದಿನಾಂಕಃ 17.10.2025 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಎ.ಪಿ.ಪಿ. ರವರಿಂದ**

ಚಾ ಸಾ 1 ನನ್ನ ಹಿರಿಯ ಸಹೋದರ. ಚಾ ಸಾ 4 ರವರ ಪರಿಚಯ ಇದೆ ಸದರಿಯವರು ಉರ್ದು ಹೈಸ್ಕೂಲ ಮುಖ್ಯೋಪಾದ್ಯಾಯರು ಇರುತ್ತಾರೆ. ಚಾ ಸಾ 9 ನನ್ನ ಸಹೋದರ ಮಗ. ಚಾ ಸಾ 10 ನನ್ನ ಸಹೋದರ. ಚಾ ಸಾ 5 ರಿಂದ 7 ರವರ ಪರಿಚಯ ಇದೆ.

ಚಾ ಸಾ 1 ರಿವರಿಗೆ 3 ಜನ ಮಕ್ಕಳಿದ್ದು ಅವರ ಹೆಸರು ಖಲೀದ, ರಫೀಕ ಮತ್ತು ಮಸ್ತಾಕ ಎಂದು ಇರುತ್ತಾರೆ. ಖಲೀದ ಯಾವ ಶಾಲೆಯಲ್ಲಿ ಓದುತ್ತಿದ್ದ ಮತ್ತು ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ದಿ 06-12-2017 ರಂದು ನಾನು ವ್ಯಾಪಾರ ಮುಗಿಸಿಕೊಂಡು ಮನೆಗೆ ಹೋಗುವಾಗ ನನ್ನ

ಸಹೋದರ ಫೋನ್ ಮಾಡಿ ತಮ್ಮ ಅಪಘಾತ ಆಗಿರುವುದಾಗಿ ತಿಳಿಸಿರುತ್ತಾರೆ. ನಂತರ ನಾವು ಉರ್ದು ಹೈಸ್ಕೂಲ ಹತ್ತಿರ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋಗಿ ನೋಡಲಾಗಿ ಅಲ್ಲಿ ಒಂದು ದ್ವಿ ಚಕ್ರ ವಾಹನ ಬಿದ್ದಿದ್ದು ನಮ್ಮ ಅಣ್ಣನ ಮಗನಾದ ಖಲೀದಿ ಬಿದ್ದಿದ್ದು ಆತನಿಗೆ ಕಾಲು ಮುರಿದಿತ್ತು. ಆತನನ್ನು ನಾನು ಮತ್ತು ಸಹೋದರ ಸೇರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ.

ನಂತರ ಅಪಘಾತ ವಿಷಯ ವಿಚಾರಿಸಲಾಗಿ ಉರ್ದು ಶಾಲೆಯ ಹೆಡ್ ಮಾಸ್ಟರ ಹೇಳಿದ ಪ್ರಕರಾರದ ಶಾಲಾ ಆವರಣದಲ್ಲಿ ಆಟ ಆಡುತ್ತಿದ್ದಾಗ ರಫೀಕ ಎಂಬುವವರು ದ್ವಿ ಚಕ್ರ ವಾಹನ ಚಾಲನೆ ಮಾಡಿಕೊಂಡು ಬಂದು ಡಿಕ್ಕಿಪಡಿಸಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ಅಣ್ಣನ ಮಗನ ಕಾಲಿಗೆ ಬಲಗಾಲಿಗೆ ಪಟ್ಟಾಗಿತ್ತು. ಗಾಯಾಳುವನ್ನು ನಾವು ವಿಜಯಪುರದ ಹತ್ತಿವಾಲೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋದಾಗ ವಾಹನ ನಂಬರ ಕೆಎ/28/ಸಿಸಿ/0026 ಅಂತಾ ಇತ್ತು.

ಖಲೀದ ಆಟ ಆಡುವಾಗ ಆತನೊಂದಿಗೆ ಯಾರು ಇದ್ದರು ಎಂದು ಹೇಳಲು ಬರುವುದಿಲ್ಲ. ಅಪಘಾತದ ನಂತರ ಚಾ ಸಾ 1 ರವರು ಏನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಘಟನೆ ಬಗ್ಗೆ ಪೋಲಿಸರು ನನ್ನನ್ನು ವಿಚಾರಣೆ ಮಾಡಿಲ್ಲ. ಅಪಘಾತವು ಮದ್ಯಾಹ್ನ 3 ರಿಂದ 3.30 ಗಂಟೆ ಸಮಯದಲ್ಲಿ ಆಗಿರುತ್ತದೆ ಎಂದು ಗೊತ್ತಾಗಿರುತ್ತದೆ.

ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಆತ ಸಧ್ಯ ಗೈರು ಹಾಜರಿದ್ದು ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು ಗುರುತಿಸುವಿಕೆ ಕುರಿತು ಯಾವುದೇ ತಕರಾರು ಇರುವುದಿಲ್ಲ ಎಂದು ನುಡಿದಿರುತ್ತಾರೆ.

(ಈ ಹಂತದಲ್ಲಿ ಎ.ಪಿ.ಪಿ. ರವರು ಸಾಕ್ಷಿಯನ್ನು ಭಾಗಶ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೇಳಿರುತ್ತಾರೆ, ಅನುಮತಿ ನೀಡಲಾಯಿತು).

**ಪಾಟೀಸವಾಲುಃ ಎ.ಪಿ.ಪಿ. ರವರಿಂದಃ**

ಅಪಘಾತಪಡಿಸಿದ ವಾಹನ ಕೆಎ 28/ಟಿಸಿ/0026 ಅಂತಾ ಇತ್ತು ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿದಿರುತ್ತಾರೆ. ಅಪಘಾತದ ಸಮಯದಲ್ಲಿ ಚಾ ಸಾ 9 ರವರೊಂದಿಗೆ ಚಾ ಸಾ 5 ರಿಂದ 7 ರವರು ಇದ್ದು ಆತನೊಂದಿಗೆ ವಾಲಿಬಾಲ್ ಆಟ ಆಡುತ್ತಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ರಫೀಕ ತನ್ನ ವಾಹನವನ್ನು ಅತೀ ವೇಗವಾಗಿ ಮತ್ತು ಅಲಕ್ಷ್ಯತನದಿಂದ ಚಾಲನೆ ಮಾಡಿಕೊಂಡು ಚಾ ಸಾ 9 ರವರಿಗೆ ಅಪಘಾತಪಡಿಸಿರುತ್ತಾರೆ ಎಂದರೆ ಸರಿ. ಅಪಘಾತವಾದಾಗ ಚಾ ಸಾ 9 ರವರು ದೇವರ ಹಿಪ್ಪರಗಿ ಉರ್ದು ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದರು ಎಂದರೆ ಸರಿ. ಘಟನೆ ಕುರಿತು ಚಾ ಸಾ 1 ರವರು ದೂರು ನೀಡಿದ್ದರು ಎಂದರೆ ಸರಿ. ಅಪಘತವಾದ ಬಗ್ಗೆ ಪೋಲಿಸರ ನನ್ನ ಹೇಳಿಕೆ ಪಡೆದಿರುತ್ತಾರೆ ಎಂದರೆ ಸರಿ. ಅಪಘಾತ ಮಾಡಿದ ವಾಹನದ ಸಂಖ್ಯೆ ಸರಿಯಾಗಿ ಗೊತ್ತಿದ್ದು ಹಾಗೂ ಚಾ ಸಾ 9 ರವರೊಂದಿಗೆ ಚಾ ಸಾ 5 ರಿಂದ 7 ರವರು ಇದ್ದರು ಸಹ ನಾನು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಪಿ ಎಸ್ ಬಿ ವಕೀಲರಿಂದ**

ಅಪಘಾತವಾದಾಗ ಸಮಯದಲ್ಲಿ ತಾವು ಎಲ್ಲಿದ್ದೀರಿ ಎಂದರೆ ಸಾಕ್ಷಿ ತನ್ನ ಮನೆಯಲ್ಲಿರುವುದಾಗಿ ಎಂದು ನುಡಿದಿರುತ್ತಾರೆ. ಹಾಗಾಗಿ ಅಪಘಾತ

ಹೇಗಾಗಿದೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಯಾರ ತಪ್ಪಿನಿಂದ ಅಪಘಾತವಾಗಿದೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಚಾ ಸಾ 4 ರವರು ನನಗೆ ಅಪಘಾತ ಹೇಗೆ ಆಗಿರುತ್ತದೆ ಎಂದು ಹೇಳಿರುತ್ತಾರೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಚಾ ಸಾ 1 ರವರು ನನ್ನ ಸಹೋದರ ಇರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.